ಜನರ ಶಾಪ ತಮಗೆಲ್ಲಿ ತಟ್ಟೀತೋ ಎಂದು ಭಯಬೀತರಾದ ನಗರಸಾರಿಗೆಯವರು ಪರ್ಯಾಯ ಸಾರಿಗೆಯ ಬಗ್ಗೆ ಚಿಂತಿಸಲೇಬೇಕಾಯ್ತು. ಆದರೆ ತಾವೇ ನಿರ್ಧಾರ ತೆಗೆದುಕೊಂಡು ಜನರ ಅಪಹಾಸ್ಯಕ್ಕೆ ಗುರಿಯಾಗುವ ಬದಲು ಅವರ ಸಲಹೆಯನ್ನೇ ಪರಿಗಣಿಸಿದರೆ ತಾವು ಬಚಾವಾಗಬಹುದು ಎಂದು ಒಬ್ಬ ಹಿರಿಯ ಅಧಿಕಾರಿಗೆ ಹೊಳೆಯಿತು. ಎಲ್ಲ ವರ್ಗಗಳ ಪ್ರಯಾಣಿಕರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಕಾರ್ಮಿಕ ನಾಯಕರು, ರಾಜಕಾರಣಿಗಳು, ಹೀಗೆ ಕಲಸುಮೇಲೋಗರದ ಸಭೆ ಏರ್ಪಾಟು ಮಾಡಿದರು. ನಮ್ಮ ಗೆಳೆಯರ ಬಳಗದಿಂದ ಶಿಂಗ್ರೀಕನನ್ನು ಆರಿಸಿ ಕಳುಹಿಸಿದ್ದೆವು.

ಸಾರಿಗೆ ಸಂಸ್ಥೆಯ ಪರವಾಗಿ ಸ್ವಾಗತ ಕೋರುತ್ತಾ ಅಧಿಕಾರಿಯೊಬ್ಬರು ಹೀಗೆ ನುಡಿದರು – 'ಸರ್ವರಿಗೆ ಸುಸ್ವಾಗತ.' ತಕ್ಷಣವೇ ಹೋಟೆಲಿನ ಸರ್ವರ್ ಒಬ್ಬ ಸರ್ವರ ಮುಂದೂ ಕಾಫಿ ಮತ್ತು ಬಜ್ಜಿಯ ಪ್ಲೇಟನ್ನಿರಿಸಿ ನಿರ್ಗಮಿಸಿದ. ಅವರು ಮಾತು ಮುಂದುವರೆಸಿ – 'ಎಲ್ಲರೂ ಬಜ್ಜಿ ಕಾಫಿಯನ್ನು ತಿಂದು ಕುಡಿದು ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕಾಗಿ ಕೋರುತ್ತೇನೆ' ಎಂದು ತಮ್ಮ ಮುಂದಿದ್ದ ಪ್ಲೇಟಿಗೆ ಕೈಹಾಕಿದರು. ಚರ್ ಚರ, ಸೊರ್ ಸೊರ ಸದ್ದು ಸ್ವಲ್ಪ ಹೊತ್ತು ಹಾಲನ್ನು ತುಂಬಿತು. ಸದ್ದಡಗಿದ ಮೇಲೆ ಅಧಿಕಾರಿ ಮತ್ತೊಮ್ಮೆ ಮಾತು ಪ್ರಾರಂಭಿಸಿದರು. 'ಮಳೆರಾಯನ ಅತಿಯಾದ ಪ್ರೀತಿ ನಮ್ಮ ನಗರದ ಮೇಲಿರುವುದರಿಂದ ಜನಗಳಿಗೆಲ್ಲ ತೊಂದರೆಯಾಗುತ್ತಿದೆ ಮತ್ತು ನಮ್ಮ ಸಂಸ್ಥೆಯ ಕಾರ್ಯದ ಮೇಲೂ ಅದರ ಪರಿಣಾಮವಾಗಿರುವ ವಿಷಯ




ತಮಗೆಲ್ಲಾ ತಿಳಿದದ್ದೇ. ಹಾಗಾಗಿ ಪರ್ಯಾಯ ನಗರ ಸಾರಿಗೆಯ ಬಗ್ಗೆ ತಾವುಗಳು ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕಾಗಿ ಈ ಮೂಲಕ ಕೋರುತ್ತೇವೆ.'

ರಾಜಕಾರಣಿಯೊಬ್ಬರು 'ನಮ್ ಸರ್ಕಾರ್‌ದಾಗೆ ಒಂದಷ್ಟು ಹೆಲಿಕಾಪ್ಟರ್‌ಗುಳು ಸುಮ್ನೆ ಬಿದ್ದಿದಾವೆ. ಅವನ್ನ ಓಡುಸ್ರೀ' ಎಂದು ಹೇಳಿದರು. ತಕ್ಷಣ ಎದ್ದು ನಿಂತ ಪತ್ರಕರ್ತರೊಬ್ಬರು 'ಸುತ್ತಾ ಮುತ್ತಾ ಇರೋ ಹಳ್ಳಿಯೋರೆಲ್ಲ ಪಟ್ಟಣ ಸೇರ್ಕೊಂಡು, ಜನಸಂಖ್ಯೆ ಇಷ್ಟೊಂದು ಜಾಸ್ತಿಯಾಗ್ತಾ ಇದೆ ನಮ್ಮೂರಲ್ಲಿ. ಜನ ಕಾಲೂರೋಕೆ ಸ್ಥಳ ಇಲ್ದೇ ಪರದಾಡ್ತಿರೋವಾಗ ಊರ ತುಂಬಾ ಹೆಲಿಪ್ಯಾಡ್ ಹೆಂಗೆ ನಿರ್ಮಾಣ ಮಾಡ್ತೀರಿ ಸ್ವಾಮಿ? ಅಲ್ದೆ ಹೆಲಿಕಾಪ್ಟರನ್ನ ವಿಮಾನ ಅಂದ್ಕೊಂಡ್ರಾ? ಅದ್ರಲ್ಲಿ ಹಿಡಿಯೋದು ಮೂರು ಮತ್ತೊಂದು ಜನ. ಎಷ್ಟು ಟ್ರಿಪ್ ಓಡುಸ್ತೀರಿ?' ಎಂದೆಲ್ಲ ಪ್ರಶ್ನೆಗಳ ಸುರಿಮಳೆ ಸುರಿಸಿದರು. ಅವರಿಗೆ ಬರಬೇಕಾದ ಯಾವುದೋ ಪ್ರಶಸ್ತಿಯನ್ನು ಇದೇ ಶಾಸಕರು ತಮ್ಮ ಭಾವಮೈದುನನಿಗೆ ಕೊಡಿಸಿದ್ದರಂತೆ. ಪತ್ರಕರ್ತರು ಆ ಸಿಟ್ಟನ್ನು ಈಗ ತೀರಿಸಿಕೊಂಡಿದ್ದರು!

ನಮ್ಮ ಶಿಂಗ್ರೀಕ ಎದ್ದು ನಿಂತ. 'ನೋ ನೋ ನೋ. ಇದು ಆಗುಹೋಗುವ ಬಾಬತ್ತಲ್ಲ. ಪರ್ಯಾಯ ಸಾರಿಗೆ ಅಂದ್ರೆ ಅದು ನಡ್ಯೋ ಹಂಗೂ ಇರ್ಬೇಡ್ವೇ? ಭೂಮಾರ್ಗ ಮುಚ್ಚಿಹೋಗಿದೆ, ವಾಯುಮಾರ್ಗ ಸಾಧ್ಯವಿಲ್ಲ ಅಂತಾಯ್ತು. ಇನ್ನು ಉಳಿದಿರೋದು ಜಲಮಾರ್ಗ ಒಂದೇ. ಹೇಗೂ ಎಲ್ಲ ರಸ್ತೆಗಳಲ್ಲೂ ಮಂಡಿ ಉದ್ದ ನೀರಿದೆ. ಆ ಕಡೆ ಈ ಕಡೆ ಇರೋ ಚರಂಡಿ ನೀರೂ ಸೇರ್ಕೊಂಡ್ರೆ ಸೊಂಟದ ಮಟ್ಟ ಮುಟ್ಟುತ್ತೆ. ನಗರ ಸಾರಿಗೆಯವರು ಬಸ್ ಬದ್ಲು ಒಂದಷ್ಟು ಬೋಟುಗಳನ್ನು ಖರೀದಿಸಿದ್ರೆ ಆಯ್ತಪ್ಪಾ!' ಎನ್ನುವುದು ಶಿಂಗ್ರೀಕನ ಅಮೂಲ್ಯ ಸಲಹೆ.

ಬೋಟು ಖರೀದಿ ಸಾರಿಗೆ ಇಲಾಖೆಯ ಕೈಕೆಳಗೇ ನಡೆಯಬೇಕು ಎನ್ನುವ ಧ್ವನಿ ಶಿಂಗ್ರೀಕನ ಮಾತಿನಲ್ಲಿ ಕೇಳಿಸಿದಂತಾಗಿ ಸಾರಿಗೆ ಅಧಿಕಾರಿಗೆ ಖುಷಿಯಾಯ್ತು. 'ಆಗಬಹುದು ಆಗಬಹುದು' ಎಂದರು, ಇನ್ಯಾರಾದರೂ ಕಲ್ಲು ಹಾಕಿಯಾರು ಎಂಬ ಗಡಿಬಿಡಿಯಲ್ಲಿ!

ಮಹಿಳಾಮಣಿಯೊಬ್ಬರು ಮಾತು ಶುರು ಹಚ್ಚಿಕೊಂಡರು. 'ಒಂದೊಂದ್ ಕಡೆ ನೀರಿದ್ರೆ ಇನ್ನೊಂದ್ ಕಡೆ ಇರಲ್ಲಪ್ಪಾ. ಅಲ್ಲಿಗೇನು ಕಾವೇರಿ ನೀರು ತಂದು ಹಾಕ್ತೀರಾ?' ಎಂಬ ಪ್ರಶ್ನೆಯನ್ನೆಸೆದು, 'ನಾನೇನು ಕಮ್ಮಿ' ಅನ್ನುವಂತೆ ಎಲ್ಲರ ಕಡೆ ನೋಡಿದರು. ಅದಕ್ಕೆ ಇನ್ನೊಬ್ಬರು ಉತ್ತರಿಸಿದರು. 'ಅದೇನೂ ಅಷ್ಟು ಕಷ್ಟ ಅಲ್ಲ ಬಿಡಿ. ನಮ್ಮ ನಗರಪಾಲಿಕೆಯವರು, ಒಳಚರಂಡಿ ಮಂಡಲಿಯವರು ಈಗ ಮಾಡ್ತಿರೋ ಹಾಗೇ ಕೆಲಸ ಮಾಡಿದರೆ ಎಲ್ಲಾ ಕಡೆ ನೀರು ಸಲೀಸಾಗಿ ನಿಲ್ಲುತ್ತೆ. ಎಲ್ಲರೂ ಅವರನ್ನೊಮ್ಮೆ ಅಭಿನಂದಿಸೋಣ.' ಸಭೆ ಗೊಳ್ಳೆಂದಿತು!

'ಅದ್ಸರಿ... ಈ ನಿಮ್ಮ ದೋಣಿ ಸಾರಿಗೆಗೆ ಸ್ಟಾಪುಗಳು ಎಲ್ಲೆಲ್ಲಿ ಇರುತ್ವೆ?' ಹಿರಿಯ ನಾಗರಿಕರೊಬ್ಬರ ಪ್ರಶ್ನೆ.

'ಅದಕ್ಕೇನೂ ಕಷ್ಟವಿಲ್ಲ. ಈಗಿರೋ ಬಸ್ಟಾಪುಗಳನ್ನೇ ಎತ್ತರಿಸಿ ಕಟ್ಟೆ ಕಟ್ಟಿದ್ರಾಯ್ತು. ಜನ ಸಲೀಸಾಗಿ ಇಳ್ದು ಹತ್ತಿ ಮಾಡಬಹುದು' ಸಾರಿಗೆ ಅಧಿಕಾರಿಯೇ ಉತ್ತರಿಸಿದರು. ಈ ಸ್ಕೀಮು ಕೈತಪ್ಪಬಾರದು ಒಟ್ಟಿನಲ್ಲಿ!

ಸಾರಿಗೆ ಇಲಾಖೆಯ ಕಾರ್ಮಿಕ ನಾಯಕರೀಗ ಎದ್ದು ನಿಂತರು. 'ನಾವು ರಸ್ತೆಯಲ್ಲಿ ಸ್ಟಾಪಿಗಿಂತ ಎಷ್ಟೋ ಹಿಂದೆ ಅಥ್ವಾ ಎಷ್ಟೋ ಮುಂದೆ ಬಸ್ಸನ್ನ ನಿಲ್ಸಿ, ಜನ ಓಡಿಬಂದು ಹತ್ತೋಕೆ ಪರದಾಡೋದನ್ನ ನೋಡಿ ಆನಂದ ಪಡ್ಕೋತಿದ್ವಿ. ಅದು ತಪ್ಪುತ್ತೆ. ಅಲ್ದೇ ಇದು ನಮ್ಮ ಹೋರಾಟದ ಹಕ್ಕುಗಳನ್ನು ಮೊಟಕು ಮಾಡುತ್ತೆ. ಮಿಂಚಿನ ಮುಷ್ಕರ ಮಾಡ್ದಾಗ ಬಸ್ಸುಗಳನ್ನ ನಡುರಸ್ತೆಯಲ್ಲಿ ಅಡ್ಡಾದಿಡ್ಡಿ ನಿಲ್ಲಿಸಿ ನಾವು ಇಳಿದು ಹೋಗ್ಬಿಡ್ತಿತ್ತು. ಜನಸಂಚಾರಕ್ಕೆ ತೊಂದರೆಯಾಗಿ ಎಲ್ಲಾ ನಮ್ಮನ್ನ ಬೈಕೊಂಡಾಗ ನಮ್ಮ ಬೇಡಿಕೆಗಳನ್ನ ಈಡೇರಿಸ್ಕೋಬಹುದಿತ್ತು. ಈಗ ಅದು ಸಾಧ್ಯ ಇಲ್ಲ. ನಾವು ಇಳಿಯೋಕೋಸ್ಕರನಾದ್ರೂ ದೋಣೀನ ದಡಕ್ಕೆ ತರ್ಲೇಬೇಕಲ್ಲ. ಯಾರಿಗೂ ತೊಂದ್ರೆ ಆಗ್ದಿದ್ರೆ ನಮ್ಮ ಬೇಡಿಕೆಯನ್ನು ಯಾರೂ ಗಮನಕ್ಕೇ ತಗೊಳ್ಳಲ್ಲ. ಹಾಗಾಗಿ ಇದನ್ನ ವಿರೋಧಿಸಿ ನಾವು ಸಭಾತ್ಯಾಗ ಮಾಡ್ತೀವಿ' ಎನ್ನುತ್ತಾ ಯಾರಿಗೋ 'ಜಿಂದಾಬಾದ್' ಕೂಗಿ ಹೊರನಡೆದರು. ಅರೆನಿದ್ದೆಯಲ್ಲಿದ್ದ ಪುಡಾರಿಯೊಬ್ಬರು ಸಭಾತ್ಯಾಗ ಅನ್ನೋ ಪದ ಕಿವಿಗೆ ಬಿದ್ದಿದ್ದೇ 'ಜೈ... ಜೈ...' ಎಂದು ಕೂಗುತ್ತಾ ಹಿಂಬಾಲಿಸಿದರು – ವಿರೋಧ ಪಕ್ಷದವರಿರಬೇಕು!

ಸುಗಮವಾಗಿ ಪ್ರಾರಂಭವಾದ ಸಭೆ ಅನಿರೀಕ್ಷಿತವಾಗಿ ಗೊಂದಲದ ಗೂಡಾಗಿದ್ದನ್ನು ಕಂಡ ಸಾರಿಗೆ ಅಧಿಕಾರಿ 'ತಮ್ಮ ಸಲಹೆಗಳನ್ನು ಸರ್ಕಾರದ ಮುಂದಿಟ್ಟು ಪರ್ಯಾಯ ಸಾರಿಗೆಯ ಬಗೆಗೆ ತೀರ್ಮಾನ ತೆಗೆದುಕೊಳ್ಳಲಾಗುವುದು. ಈ ಸಭೆಯಲ್ಲಿ ಭಾಗವಹಿಸಿ ಸಲಹೆಗಳನ್ನಿತ್ತ ತಮ್ಮೆಲ್ಲರಿಗೆ ಇಲಾಖೆಯ ಪರವಾಗಿ ವಂದಿಸುತ್ತೇವೆ' ಎಂದು ಹೇಳಿದರು. ಅವರಿಗೆ ಬಹಳ ನಿರಾಸೆಯೇ ಆಗಿತ್ತು!

ಪರ್ಯಾಯ ಸಾರಿಗೆ ವ್ಯವಸ್ಥೆ ಜಾರಿಗೆ ಬರುತ್ತೋ ಇಲ್ಲವೋ, ಜಾರಿಗೆ ಬರುವುದಾದರೆ ಎಂದಿನಿಂದ ಅನ್ನೋ ಪ್ರಶ್ನೆಗಳು ಪ್ರತಿ ಮಳೆಗಾಲದಲ್ಲೂ ಎಲ್ಲರನ್ನೂ ಕಾಡುತ್ತವೆ. ಉತ್ತರ ಮಾತ್ರ ಸಿಕ್ಕಿಲ್ಲ!